ವಿಷಯ(iv): ಚಿತ್ರಕಲಾ ಪದವೀಧರರ ನೇಮಕಾತಿ ಕುರಿತು

ಶ್ರೀ ಪಿ.ಎಚ್. ಪೂಜಾರ್ (ಬಾಗಲಕೋಟೆ): ಮಾನ್ಯ ಅಧ್ಯಕ್ಷರೇ, ಚಿತ್ರಕಲಾ ಪದವೀಧರರ ನೇಮಕಾತಿ ಕುರಿತು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಉಳಿಸಿಕೊಂಡು ಬಂದ ಒಂದು ಕಲೆ ಅಂದರೆ ಚಿತ್ರಕಲೆ. ಪ್ರಾಚೀನ ಸಂಸ್ಕೃತಿಯನ್ನು ಸದಾಕಾಲ ಕಾಪಾಡಿಕೊಂಡು ಬರಬೇಕಾದುದು ನಮ್ಮ ಕರ್ತವ್ಯ. ನಮ್ಮ ರಾಜ್ಯದಲ್ಲಿ ಸುಮಾರು 120 ಚಿತ್ರಕಲಾ ಶಾಲೆಗಳಿದ್ದು ಅಲ್ಲಿ ಕಲಿತ ಪದವೀಧರರು ಬೀದಿಗೆ ಬಿದ್ದಿದ್ದಾರೆ. ಕಳೆದ 14 ವರ್ಷಗಳಿಂದ ಇದುವರೆಗೂ ಯಾವುದೇ ನೇಮಕಾತಿಯನ್ನು ಪ್ರಾಥಮಿಕ ಶಾಲೆಗಳಲ್ಲಿ ಆಗಲಿ ಅಥವಾ ಮಾಧ್ಯಮಿಕ ಶಾಲೆಗಳಲ್ಲಿ ಆಗಲಿ ಮಾಡಲಿಲ್ಲ. ಈ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕು. 1982ನೇ ಇಸವಿಯಿಂದ ಏನು ನಿರುದ್ಯೋಗಿ ಪದವೀಧರರಾಗಿದ್ದಾರೆ ಅವರು ಆಮರಣ ಉಪವಾಸ ಸತ್ಯಾಗ್ರಹ ಕೈಗೊಳ್ಳುವವರಿದ್ದಾರೆ, ಹೋರಾಟ ಮಾಡುವವರಿದ್ದಾರೆ. ಇದಕ್ಕೆ ಅವಕಾಶ ಕೊಡದೇ ಸರ್ಕಾರ ಅವರ ನೆರವಿಗೆ ಬರಬೇಕೆಂದು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಹದಿಮೂರು ವರ್ಷಗಳ ಹಿಂದೆ ಇದೇ ಹಿನ್ನೆಲೆಯಲ್ಲಿ ಸರಕಾರ ಚಿಂತನೆ ಮಾಡುತ್ತಾ ಮಾಡುತ್ತಾ 1997ರಲ್ಲಿ ನಿವೃತ್ತ ಶಿಕ್ಷಣ ಇಲಾಖಾ ಕಾರ್ಯದರ್ಶಿಯವರಾಗಿದ್ದ ಶ್ರೀಮಾನ್ ಟಿ.ಪಿ. ಇಸ್ಸಾರ್ ಅವರನ್ನು ಈ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ವಿನಂತಿ ಮಾಡಿಕೊಂಡಿತು. ಅವರು 1997ರಲ್ಲಿ ವರದಿಯನ್ನು ಸಲ್ಲಿಸಿದ ನಂತರ ಅವರಲ್ಲಿ ಅವರು ಪ್ರತಿಯೊಂದು ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕೆಂದು ಪ್ರತಿಪಾದಿಸಿದ್ದರು. ಆದರೆ ಆ ವರದಿಯ ಮೇಲೆ ಸರಕಾರದವರು ಇವೊತ್ತಿನವರೆಗೂ ಕೂಡ ಯಾವುದೇ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ. ಸರಕಾರದ ವಿಳಂಬ ನೀತಿಯಿಂದಾಗಿ ಬಾಗಲಕೋಟೆ ಮತ್ತು ಬಿಜಾಪುರದಲ್ಲಿ 26-2-2001 ರಂದು ಚಿತ್ರಕಲಾ ಪದವೀಧರರು ಆಮರಣ ಉಪವಾಸಕ್ಕೆ ಕುಳಿತುಕೊಳ್ಳುವ ದುಸ್ಥಿತಿಯು ಬಂದಿತ್ತು. ಮಾನ್ಯ ಸಚಿವರಾದ ಕಾಶಪ್ಪನವರ್‌ರವರು ಕೂಡ ಧರಣಿ ನಿರತ ಶಿಕ್ಷಕರ ಅಭ್ಯರ್ಥಿಗಳನ್ನು ಕಂಡು ಮಾತನಾಡಿ ಬಂದಿದ್ದಾರೆ. ಈ ಹಿಂದೆ ಬೆಳಗಾವಿಯಲ್ಲಿ 1998ರಲ್ಲಿ 280 ಚಿತ್ರಕಲಾ ಶಿಕ್ಷಕರನ್ನು ನೇಮಿಸಬೇಕೆಂಬ ನಿಟ್ಟಿನಲ್ಲಿ ಅರ್ಜಿಗಳನ್ನು ಕೂಡ ಕರೆಯಲಾಗಿತ್ತು. ಆ ಪ್ರಕರಣವು ಏನಾಯಿತೆಂದು ಇವೊತ್ತಿನವರೆಗೂ ಗೊತ್ತಿಲ್ಲ. ರಾಜ್ಯದಲ್ಲಿರುವ 40 ಸಾವಿರ ಚಿತ್ರಕಲಾ ಪದವೀಧರರೇನಿದ್ದಾರೆ, ಅವರು ತಮ್ಮ ನೇಮಕಾತಿಯ ಭರವಸೆಯನ್ನು ಹೊಂದಿದ್ದಾರೆ. ಇಸ್ಸಾರ್ ವರದಿಯಂತೆ ನೇಮಕಾತಿಯನ್ನು ಸರಕಾರದವರು ಮಾಡುತ್ತಾರೆ ಎಂಬ ಭರವಸೆಯನ್ನು ಇಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆ ಸುಳ್ಳಾಗದಂತೆ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವನ್ನು ಜರುಗಿಸಬೇಕೆಂದು ಸನ್ಮಾನ್ಯ ಶಿಕ್ಷಣ ಸಚಿವರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, 407 ಜನ ಚಿತ್ರಕಲಾ ಶಿಕ್ಷಕರನ್ನು ತುಂಬಬೇಕೆಂದು ಈಗಾಗಲೇ ನೋಟಿಫಿಕೇಶನ್ ಕೂಡ ಮಾಡಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ 407 ಜನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆ ಎಂಬ ಭರವಸೆಯನ್ನು ತಮ್ಮ ಮೂಲಕ ಕೊಡಬಯಸುತ್ತೇನೆ.